

# ಹಿರಿ ಜೋಡಿ!

ನಿಶ್ಚಿತಾರ್ಥವಾದ ಯಾವುದೇ ಈಗಿನ ಕಾಲದ ಜೋಡಿಯನ್ನು ಕೇಳಿ ನೋಡಿ, ಅವರು ತಮ್ಮ ಮದುವೆಯ ದಿನದಂದು ಬರೀ ಫೋಟೊ ಮಾತ್ರ ಅಲ್ಲ ವೀಡಿಯೋವನ್ನೂ ತೆಗೆಸಿಕೊಳ್ಳುವ ಪ್ಲಾನ್ ಮಾಡಿಯೇ ಇರುತ್ತಾರೆ. ತಮ್ಮ ಮದುವೆಯ ದಿನವನ್ನು ನೆನಪಿಟ್ಟುಕೊಳ್ಳುವುದಕ್ಕಾಗಿ ಎಲ್ಲರೂ ಫೋಟೊ ತೆಗೆಸಿಕೊಳ್ಳುವುದು ಸಾಮಾನ್ಯ ಸಂಗತಿ. ಆದರೆ ಚೀನಾ ದೇಶದ ಸಿಚ್ವಾನ್ ಪ್ರಾಂತ್ಯದ ನಾನ್ಚೊಂಗ್ ನಲ್ಲಿರುವ ಜೋಡಿಯ ಫೋಟೊ ನೋಡಿ. ಇದು ಅವರ ಮದುವೆಯ ದಿನ ತೆಗೆದ ಫೋಟೊ ಅಲ್ಲ.

ಯಾಕೆಂದರೆ ಇವರ ಮದುವೆ ನಡೆದಿದ್ದು 1924 ರಲ್ಲಿ, ಡಿಜಿಟಲ್ ಕ್ಯಾಮೆರಾ ಬಂದಿರುವುದಕ್ಕಿಂತ ಕೆಲವು ವರ್ಷಗಳ ಮೊದಲು. ಬರೋಬ್ಬರಿ 88 ವರ್ಷಗಳ ಅನ್ಯೋನ್ಯ ದಾಂಪತ್ಯ ಜೀವನ ನಡೆಸಿದ ದಂಪತಿ ತಮ್ಮ ಮದುವೆ ವಾರ್ಷಿಕೋತ್ಸವದ ವಿಶೇಷ ದಿನದಂದು, ಮದುವೆ ಪೋಷಾಕು ಧರಿಸಿ ಕ್ಯಾಮೆರಾಕ್ಕೆ ಹೀಗೆ ನಗುನಗುತ್ತಾ ಪೋಸ್ ಕೊಟ್ಟಿದ್ದಾರೆ.

ಅಂದ ಹಾಗೆ ಇಲ್ಲಿರುವ ವರ, ವುಕಂಫಾನ್‌ಗೆ 101 ವರ್ಷ ವಯಸ್ಸಾಗಿದ್ದರೆ, ವಧುವಿನ ದಿರಿಸಿನಲ್ಲಿ ಮುಗುಳುನಗೆ ಬೀರುತ್ತಿರುವ ವುಸೋಗ್ನೇಶಿಗೆ 103 ವರ್ಷ ವಯಸ್ಸು. ಇಂದಿಗೂ ಬಲು ಪ್ರೀತಿಯಿಂದ ಬಾಳ್ವೆ ನಡೆಸುತ್ತಿರುವ ಈ ಶತಾಯುಷಿಗಳು ತಾವೇ ಚೀನಾ ದೇಶದ ಅತ್ಯಂತ ಹಿರಿಯ ದಂಪತಿ ಎಂಬ ಹಿರಿಮೆಯಲ್ಲಿ ಹಿರಿ ಹಿರಿ ಹಿಗ್ಗುತ್ತಿದ್ದಾರೆ.

■ ವಿನಯ್‌ಕುಮಾರ್ ಬಿ.ಹೆಚ್.



ಗಂಡನ ವಿಶೇಷ ಕೋಟಿನ ಗುಂಡಿ ಹೊಲಿಯುತ್ತಿರುವ ವುಸೋಗ್ನೇಶಿ